KACN320015172012

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,ರವರ ನ್ಯಾಯಾಲಯ,ಕೊಳ್ಳೇಗಾಲ**

**ದಿನಾಂಕಃ 18 ನೇ ಫೆಬ್ರವರಿ 2026**

**ಉಪಸ್ಥಿತರು**

**ಶ್ರೀಮತಿ. ಕಾವ್ಯಶ್ರೀ ಎಂ.**
**ಬಿ.ಎ.,ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.ಕೊಳ್ಳೇಗಾಲ**

**ಅಸಲು ದಾವಾ ಸಂಖ್ಯೆ.283/2012**

**ವಾದಿಗಳು** : ಮಹದೇವಪ್ಪ ಮತ್ತು ಇನ್ನೊಬ್ಬರು

**(ಪ್ರತಿನಿಧಿಸುವವರುಃ ಶ್ರೀ.ಎಂ.ಆರ್.ಕೆ., ವಕೀಲರು)**

**ವಿರುದ್ಧ/-**

**ಪ್ರತಿವಾದಿಗಳು** : ಮಹದೇವಪ್ಪ

**(ಪ್ರತಿನಿಧಿಸುವವರುಃ ಶ್ರೀ.ಎಸ್.ಎಸ್.ಬಿ., ವಕೀಲರು)**

**ಅರ್ಜಿ ಸಂಖ್ಯೆಃ 14/2024**

**ಅರ್ಜಿದಾರರು** : ಕುಮಾರಸ್ವಾಮಿ

........ ವಾದಿ-1ಎ

**ವಿರುದ್ಧ**

**ಎದುರುದಾರರು** : ಮಹದೇವಪ್ಪನವರ ಪರವಾಗಿ ಪ್ರತಿನಿಧಿಸುವವರು
ಜಿ.ಪಿ.ಎ ದಾರರಾದ ಮಲ್ಲೇಶ್

....... ಪ್ರತಿವಾದಿ

| | | |
|---|---|---|
| *i* | ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿ. ಪ್ರ. ಸಂ. ಕ್ರಮಾದೇಶ **26** ನಿಯಮ **9** ಸಹವಾಚಕ ಕಲಂ **151** |
| *ii* | ಅರ್ಜಿಯಲ್ಲಿ ಕೋರಿರುವ ಪರಿಹಾರ | ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡುವಂತೆ ಕೋರಿ |
| *iii* | ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | **08.04.2024** |
| | ಮಧ್ಯಂತರ ಅರ್ಜಿಯ ಸಂಖ್ಯೆ | ಮಧ್ಯಂತರ ಅರ್ಜಿ ಸಂಖ್ಯೆಃ **14** |
| *v* | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | **18.04.2024** |
| *vi* | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | **18.02.2026** |

**ಮಧ್ಯಂತರ ಅರ್ಜಿ ಸಂಖ್ಯೆ 14 ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಯ ಮೇಲಿನ ಆದೇಶ**

**1.** ಅರ್ಜಿದಾರರು/ವಾದಿ 1(ಎ) ರವರು ಅರ್ಜಿಯನ್ನು ದಾಖಲು ಮಾಡಿ ಸ್ಥಳೀಯ ತನಿಖೆಯನ್ನು ಮಾಡಲು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡುವಂತೆ ಕೋರಿ ಈ ಮೇಲ್ಕಂಡ ಮಧ್ಯತರ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**2.** ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ, ವಾದಿಯು ಪ್ರತಿವಾದಿಯರ ವಿರುದ್ಧ ಹಕ್ಕು ಘೋಷಣೆ ಮತ್ತು ಇನ್ನಿತರ ಪರಿಹಾರ ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ. ಸದರಿ ದಾವಾ ಅನುಸೂಚಿತ ಸ್ವತ್ತುಗಳ ಕೆಲವು ದಾಖಲೆಗಳಲ್ಲಿ ವಿಸ್ತೀರ್ಣವನ್ನು ಅಂಕಣಗಳಲ್ಲಿ ಮತ್ತು ಕೆಲವು ದಾಖಲೆಗಳಲ್ಲಿ ಅಡಿಗಳಲ್ಲಿ ನಮೂದು ಮಾಡಿರುತ್ತಾರೆ. ಪ್ರತಿವಾದಿಳು ವಾದಿಗೆ ಸೇರಿದ ಪಡಸಾಲೆಯನ್ನು ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ಮಾಡಿರುತ್ತಾರೆ. ಪ್ರತಿವಾದಿ ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ಮಾಡಿರುವುದು ಕಂಡು ಬಂದಿದ್ದರೂ ಸಹ ವಾದಿಯು ಸ್ವತ್ತುಗಳಲ್ಲಿ ನಿಖರವಾಗಿ ಎಷ್ಟು ವಿಸ್ತೀರ್ಣ

ಒತ್ತುವರಿ ಮಾಡಿಕೊಂಡಿರುವುದಕ್ಕೆ ಸ್ಪಷ್ಟತೆ ಕಂಡು ಬಂದಿರುವುದಿಲ್ಲ. ಸದರಿ ಸ್ವತ್ತನ್ನು ಅತಿ ಕ್ರಮವಾಗಿ ಒತ್ತುವರಿ ಮಾಡಿಕೊಂಡು ನಿರ್ಮಾಣ ಮಾಡಿರುವ ವಿಸ್ತೀರ್ಣ ತಿಳಿದುಕೊಳ್ಳುವ ಉದ್ದೇಶಕ್ಕಾಗಿ ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ. ದಾವಾ ಅನುಸೂಚಿತ ಸ್ವತ್ತು ಒಟ್ಟು 9 ಅಂಕಣಗಳಾಗಿರುತ್ತವೆ. ಆದರೆ ಪ್ರತಿವಾದಿ ಹಾಜರು ಪಡಿಸಿರುವ ವಿಲ್ ಮತ್ತು ಕ್ರಯ ಪತ್ರಗಳಲ್ಲಿ ಸದರಿ ಮಾಲೀಕತ್ವಗಳ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಈ ದಾವೆಯಲ್ಲಿ ಉಭಯಪಕ್ಷಗಾರರ ವಿಚಾರಣೆ ಮುಕ್ತಾಗೊಂಡಿರುತ್ತದೆ. ಸಾಕ್ಷ್ಯವನ್ನು ಕಲೆ ಹಾಕುವ ಅವಕಾಶವಿರುವುದಿಲ್ಲ. ಮುಂದುವರೆದು ವಾದಿಯು ತನ್ನ ದಾವೆಯನ್ನು ರುಜುವಾತು ಪಡಿಸುವ ಭಾರವನ್ನು ಹೊಂದಿದ್ದು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ. ಪ್ರತಿವಾದಿಯು ಕಟ್ಟಡ ನಿರ್ಮಾಣ ಮಾಡಿರುತ್ತಾರೆ ಎಂಬುದಾಗಿ ಒಪ್ಪಿದ ಸಂಗತಿಯಂತೆ ವಾದಿಯು ಸದರಿ ಕಟ್ಟಡವನ್ನು ಕಾನೂನು ಬಾಹಿರವಾಗಿ ನಿರ್ಮಾಣ ಮಾಡಿರುವುದಾಗಿ ತಿಳಿಸಿರುವ ಕಾರಣ ನಿಖರವಾಗಿ ಸದರಿ ಒತ್ತುವರಿ ಮಾಡಿರುವ ಸ್ವತ್ತಿನ ವಿಸ್ತೀರ್ಣವನ್ನು ನಿಖರವಾಗಿ ಪತ್ತೆ ಹಚ್ಚುವುದು ಅತ್ಯಾವಶ್ಯಕವಾಗಿರುತ್ತದೆ. ಹಾಗಾಗಿ ಸದರಿ ಸ್ವತ್ತನ್ನು ಅಳತೆ ಮಾಡಲು ಸ್ಥಳೀಯ ತನಿಖೆಗಾಗಿ ನ್ಯಾಯಾಲಯದ ನಿಯೋಗಿಯನ್ನು ನೇಮಿಸಬೇಕಾಗಿ ಕೋರಿಕೊಳ್ಳುತ್ತಾರೆ.

3. ಪ್ರತಿವಾದಿಯರು, ವಾದಿಯು ಸಲ್ಲಿಸಿದ ಅರ್ಜಿಗೆ ತನ್ನ ತಕರಾರು ಸಲ್ಲಿಸಿದ್ದು, ವಾದಿಯು ಅರ್ಜಿಯ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಸಂಗತಿಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ದಾವಾ "ಎ" ಅನುಸೂಚಿತ ಸ್ವತ್ತು 9 ಅಂಕಣದ ನಾಡ ಹೆಂಚಿನ ಮಣ್ಣಿನ ಗೋಡೆಯಿಂದ ಕೂಡಿದ ಮನೆ ಎಂಬುದಾಗಿ ತಿಳಿಸಿದ್ದು ಅದರ ವಿಸ್ತೀರ್ಣ ನಮೂದು ಮಾಡಿರುವುದಿಲ್ಲ ಹಾಗೂ ಮತ್ತೀಪುರ ಗ್ರಾಮಕ್ಕೆ ಸೇರಿದ ಯಾವ ಬಡಾವಣೆಗೆ ದಾವಾ ಅನುಸೂಚಿತ ಸ್ವತ್ತು ಇರುತ್ತದೆ ಎಂಬುದರ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ವಾದಿಗೆ ದಾವಾ "ಎ" ಅನುಸೂಚಿತ

ಸ್ವತ್ತಿನ ಪೂರ್ಣ ಮಾಹಿತಿ ಇಲ್ಲದೆ ಇರುವ ಕಾರಣ ಅವುಗಳ ಅಳತೆ ಮಾಡಿಸಿದಾಗ ಸಾಕ್ಷ್ಯಾಧಾರಗಳನ್ನು ಕಲೆ ಹಾಕಿದಂತಾಗುತ್ತದೆ. ವಾದಿಯು ದಾವಾ "ಬಿ" ಅನುಸೂಚಿತ ಸ್ವತ್ತಿನಲ್ಲಿ ಕೆಲವು ಸ್ವತ್ತುಗಳನ್ನು ಮೊಳದ ಲೆಕ್ಕದಲ್ಲಿ ಮತ್ತು ಕೆಲವು ಸ್ವತ್ತುಗಳನ್ನು ಅಡಿ ಲೆಕ್ಕದಲ್ಲಿ ತಿಳಿಸಿರುತ್ತಾರೆ. ದಾವಾ ಅನುಸೂಚಿತ ಸ್ವತ್ತು ಮತ್ತೀಪುರ ಗ್ರಾಮದ ವ್ಯಾಪ್ತಿಗೆ ಸೇರಿದ್ದು ಅದಕ್ಕೆ ನಿಖರವಾದ ಅಳತೆ ಮತ್ತು ನಕ್ಷೆ ಇಲ್ಲದೆ ಇರುವುದರಿಂದ ವಾದಿ ಹಾಜರು ಪಡಿಸಿರುವ ದಾಖಲೆಗಳ ಆಧಾರದ ಮೇಲೆ ಅಳತೆ ಮಾಡಿಸಲು ಕಾನೂನಿನಡಿಯಲ್ಲಿ ಅವಕಾಶ ಇರುವುದಿಲ್ಲ. ವಾದಿಯು ನ್ಯಾಯಾಲಯದಲ್ಲಿ ಹಾಜರು ಪಡಿಸಿರುವ ನಿಪಿ-6 ಮತ್ತು 7 ನಕ್ಷೆಯಲ್ಲೂ ಸಹ ಅಳತೆಯನ್ನು ನಮಾದು ಮಾಡಿರುವುದಿಲ್ಲ. ವಾದಿಯು ದಾವಾ ಅನುಸಾಚಿತ ಸ್ವತ್ತುಗಳನ್ನು ಅಳತೆ ಮಾಡಿ ವರದಿ ಸಲ್ಲಿಸಲು ಬರುವುದಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ವಾದಿಯು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕಾಗಿ ಕೋರಿಕೊಂಡಿರುತ್ತಾರೆ.

4. ಅರ್ಜಿದಾರರು ಸಲ್ಲಿಸಿರುವ ಅರ್ಜಿಯ ನ್ಯಾಯೋಚಿತ ವಿಲೆಗೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತದೆ.

***ಅಂಶ 1 : ಅರ್ಜಿದಾರರು ಸಲ್ಲಿಸಿರುವ ಮಧ್ಯಂತ ಅರ್ಜಿ ಸಂಖ್ಯೆ 26 ನಿಯಮ 9 ರಡಿಯಲ್ಲಿನ ಅರ್ಜಿಯನ್ನು ಪುರಸ್ಕರಿಸಲು ಸಾಕಷ್ಟು ಕಾರಣಗಳು ರುಜುವಾತುಪಡಿಸುವವರೇ?***

***ಅಂಶ 2 : ಯಾವ ಆದೇಶ?***

5. ವಾದಿಯ ಪರ ವಕೀಲರ ವಾದಗಳನ್ನು ಕೇಳಲಾಯಿತು. ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಈ ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸುತ್ತದೆ :-

**ಅಂಶ 1 :** ಸಕರಾತ್ಮಕವಾಗಿ

**ಅಂಶ 2 :** ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

-: <u>**ಕಾರಣಗಳು**</u> :-

**6. ಅಂಶ 1:-** ವಾದಿಯು ದಾವಾ ಅನುಸೂಚಿತ ಸ್ವತ್ತುಗಳಿಗೆ ಸಂಬಂಧಿಸಿದಂತೆ ಹಕ್ಕು ಘೋಷಣೆ, ಅಜ್ಞಾಪಕ ನಿರ್ಬಂಧಕಾಜ್ಞೆ ಮತ್ತು ಇನ್ನಿತರ ಪರಿಹಾರ ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ. ವಾದಿಯು ಈ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿ ನ್ಯಾಯಾಲಯದ ನಿಯೋಗಿಯನ್ನು ಸ್ಥಳೀಯ ತನಿಖೆಗಾಗಿ ನೇಮಕ ಮಾಡುವಂತೆ ಕೋರಿಕೊಂಡಿರುತ್ತಾರೆ. ದಾವೆಯಲ್ಲಿನ ದಾಖಲಾತಿಗಳನ್ನು ಪರಿಶೀಲಿಸಲಾಗಿ ಈಗಾಗಲೇ ಉಭಯ ಪಕ್ಷಗಾರರ ಅಧಿವಿಚಾರಣೆ ಮುಕ್ತಾಯಗೊಂಡಿದ್ದು ವಾದವನ್ನು ಮಂಡಿಸುವ ಹಂತದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ವಾದಿಯು ಅರ್ಜಿಯನ್ನು ದಾಖಲು ಮಾಡಿ ದಾವಾ ಅನುಸೂಚಿತ ಸ್ವತ್ತುಗಳ ಕೆಲವು ದಾಖಲಾತಿಗಳಲ್ಲಿ ಅಂಕಣಗಳಲ್ಲಿಯೂ ಮತ್ತು ಕೆಲವು ದಾಖಲಾತಿಗಳಲ್ಲಿ ಅಡಿ ಲೆಕ್ಕದಲ್ಲಿರುವ ಕಾರಣ ಅದರ ನಿಖರ ವಿಸ್ತೀರ್ಣಕ್ಕಾಗಿ ಹಾಗೂ ಆಜ್ಞಾಪಕ ನಿರ್ಬಂಧಕಾಜ್ಞೆ ಕೋರಿರುವುದರಿಂದ ಹಾಗೂ ಪ್ರತಿವಾದಿಯು ಅಕ್ರಮವಾಗಿ ಒತ್ತುವರಿ ಮಾಡಿ ಮನೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂಬುದಾಗಿ ಪರಿಹಾರವನ್ನು ಕೋರಿರುವ ಕಾರಣ ಸ್ಥಳೀಯ ತನಿಖೆಗಾಗಿ ನ್ಯಾಯಾಲಯದ ನಿಯೋಗಿ ಅವಶ್ಯಕತೆ ಇರುತ್ತದೆ ಎಂಬುದಾಗಿ ತಮ್ಮ ವಾದವನ್ನು ಮಂಡಿಸಿರುತ್ತಾರೆ. ಪ್ರತಿವಾದಿಯೂ ಅದಕ್ಕೆ ವಿರುದ್ಧವಾಗಿ ವಾದಿಯು ಹಾಜರು ಪಡಿಸಿರುವ ಬೇರೆ ಬೇರೆ ದಾಖಲಾತಿಗಳಲ್ಲಿ ನಿಖರ ವಿಸ್ತೀರ್ಣ ನಮೂದು ಮಾಡಿರುವುದಿಲ್ಲ. ಅದನ್ನು ರುಜುವಾತುಪಡಿಸುವ ಭಾರ ವಾದಿಯ ಮೇಲೆ ಇರುತ್ತದೆ. ಮನೆಯ ಮುಂದೆ ಪಡಸಾಲೆ ಇತ್ತು ಎಂಬುದಾಗಿ ಹೇಳಿದ್ದರೂ ಸಹ ಆ ಬಗ್ಗೆ ಸಾಕ್ಷ್ಯ ನೀಡಿರುವುದಿಲ್ಲ. ಹಾಗಾಗಿ ಅರ್ಜಿಯನ್ನು ವಜಾಗೊಳಿಸುವಂತೆ ಕೋರಿಕೊಂಡಿದ್ದಾರೆ.

**7.** ವಾದಿಯ ವಾದಪತ್ರವನ್ನು ಗಮನಿಸಲಾಗಿ ದಾವಾ ಅನುಸೂಚಿತ ಸ್ವತ್ತುಗಳು ಅಂಕಣ, ಮೊಳಗಳಲ್ಲಿ ವಿಸ್ತೀರ್ಣವನ್ನು ನಮೂದು ಮಾಡಿರುವುದು ಕಂಡು ಬರುತ್ತಿದೆ. ಮುಂದುವರೆದು ಪ್ರತಿವಾದಿಯೂ

ದಾವಾ "ಇ" ಅನುಸೂಚಿತ ಸ್ವತ್ತು ಸ್ವತ್ತು ಪಡಸಾಲೆಯಾಗಿದ್ದು ಸದರಿ ಸ್ವತ್ತನ್ನು ಎಲ್ಲ ಸಹೋದರರು ಉಪಯೋಗಿಸಿಕೊಂಡು ಬರುತ್ತಿದ್ದು ಎಲ್ಲರಿಗೂ ಸಹ ಹಕ್ಕು ಇರುತ್ತದೆ. ಆದರೆ ಪ್ರತಿವಾದಿ ಸದರಿ ದಾವಾ "ಇ" ಅನುಸೂಚಿತ ಸ್ವತ್ತನ್ನು ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಾಣ ಮಾಡಿರುವುದಾಗಿ ತಿಳಿಸಿರುತ್ತಾರೆ.

8. ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ಉಭಯ ಪಕ್ಷಗಾರರು ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆಗಳನ್ನು ಮುಕ್ತಾಗೊಳಿಸಿಕೊಂಡು ವಾದವನ್ನು ಮಂಡಿಸುವ ಹಂತದಲ್ಲಿರುವ ಸಮಯದಲ್ಲಿ ಅರ್ಜಿದಾರರು, ಈ ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿರುವುದು ಕಂಡು ಬರುತ್ತಿದೆ. ಅದರಂತೆ, ವಾದಿಯು, ಪ್ರತಿವಾದಿಯು ಪಡಸಾಲೆಯನ್ನು ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ಮಾಡಿರುವುದಾಗಿ ತಿಳಿಸಿದ್ದು, ಅದನ್ನು ಅಲ್ಲಗಳೆದಿದ್ದರೂ ಸಹ ಈ ಹಂತದಲ್ಲಿ ನ್ಯಾಯಾಲಯದ ನಿಯೋಗಿಯನ್ನು ನೇಮಿಸಿದ ಪಕ್ಷದಲ್ಲಿ ಸದರಿ ಪಡಸಾಲೆ ಇತ್ತು ಎಂಬ ಬಗೆಯಾಗಲಿ ಅಥವಾ ಪ್ರತಿವಾದಿ ಅದನ್ನು ಒತ್ತುವರಿ ಮಾಡಿಕೊಂಡಿರುವುದನ್ನು ಅಲ್ಲಗಳೆದಿರುತ್ತಾರೆ ಹಾಗೂ ಆ ರೀತಿ ಸ್ಥಳೀಯ ತನಿಖೆಗಾಗಿ ನ್ಯಾಯಾಲಯದ ನಿಯೋಗಿಯನ್ನು ನೇಮಿಸಿದ್ದ ಪಕ್ಷದಲ್ಲಿ ಪ್ರತಿವಾದಿ ಒತ್ತುವರಿ ಮಾಡಿಕೊಂಡಿರುವ ಬಗ್ಗೆ ನಿಖರವಾದ ಮಾಹಿತಿ ತಿಳಿದು ಬರುವ ಸಂಗತಿಯನ್ನು ಅಲ್ಲಗಳೆಯುವಂತಿಲ್ಲ. ಹಾಗೂ ಪ್ರತಿವಾದಿಯು ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ಮಾಡಿ ವಾದಿಯ ಅನುಭೋಗದ ಹಕ್ಕಿಗೆ ಅಡ್ಡಿಯನ್ನುಂಟು ಪಡಿಸಿರುವ ಬಗ್ಗೆಯೂ ಸಹ ನಿಖರವಾಗಿ ಕಂಡು ಬರುವ ಸಂಗತಿಯನ್ನು ಅಲ್ಲಗಳೆಯುವಂತಿಲ್ಲ. ಹಾಗಾಗಿ ವಾದಿ ಮತ್ತು ಪ್ರತಿವಾದಿಯರ ನಡುವಿನ ವಿವಾದವನ್ನು ಪರಿಣಾಮಕಾರಿಯಾಗಿ ವಿಲೆಮಾಡುವದಾಕ್ಕಾಗಿ ನ್ಯಾಯಾಲಯದ ನಿಯೋಗಿಯನ್ನು ನೇಮಿಸುವವುದು ಅತ್ಯವಶ್ಯಕವೆಂದು ಕಂಡು ಬರುತ್ತಿದೆ. ಆದ್ದರಿಂದ **ಈ ಅಂಶ-1 ನ್ನು ಸಕರಾತ್ಮಕವಾಗಿ ಉತ್ತರಿಸಲಾಗಿದೆ.**

9. **<u>ಅಂಶ:2</u>** ಃ ಅಂಶ 1 ರಲ್ಲಿ ಚರ್ಚಿಸಿದ ಕಾರಣಗಳಿಗಾಗಿ, ಈ ಕೆಳಕಂಡಂತೆ ಮಾಡುವ ಆದೇಶವೇನೆಂದರೆ:-

**<u>ಆದೇಶ</u>**

ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ 14 ರಲ್ಲಿ ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ.

ಉಭಯ ಪಕ್ಷಗಾರರು ನ್ಯಾಯಾಲಯದ ನಿಯೋಗಿಯು ಪರಿಣಾಮಕಾರಿಯಾಗಿ ಸ್ಥಳೀಯ ತನಿಖೆ ನಡೆಸಲು ಅನುಕೂಲವಾಗುವಂತೆ ನಿರ್ದೇಶನಗಳನ್ನು ಸಲ್ಲಿಸುವಂತೆ ಈ ಮೂಲಕ ಆದೇಶಿಸಲಾಗಿದೆ.

ನ್ಯಾಯಾಲಯದ ನಿಯೋಗಿಗೆ ರೂ 2,000/- ಗಳ ಶುಲ್ಕವನ್ನು ಪಾವತಿಸುವಂತೆ ಅರ್ಜಿದಾರರಿಗೆ ಆದೇಶಿಸಲಾಗಿದೆ.

(ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಅವರು ಗಣಕೀಕೃತಗೊಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ ದಿನಾಂಕಃ 18ನೇ ಫೆಬ್ರವರಿ 2026ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ.)

**(ಕಾವ್ಯಶ್ರೀ. ಎಂ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.

**(ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕ ಆದೇಶವನ್ನು ಘೋಷಿಸಲಾಯಿತು)**

**ಆದೇಶ**

ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ 14 ರಲ್ಲಿ ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ.

ಉಭಯ ಪಕ್ಷಗಾರರು ನ್ಯಾಯಾಲಯದ ನಿಯೋಗಿಯು ಪರಿಣಾಮಕಾರಿಯಾಗಿ ಸ್ಥಳೀಯ ತನಿಖೆ ನಡೆಸಲು ಅನುಕೂಲವಾಗುವಂತೆ ನಿರ್ದೇಶನಗಳನ್ನು ಸಲ್ಲಿಸುವಂತೆ ಈ ಮೂಲಕ ಆದೇಶಿಸಲಾಗಿದೆ.

ನ್ಯಾಯಾಲಯದ ನಿಯೋಗಿಗೆ ರೂ 2,000/- ಗಳ ಶುಲ್ಕವನ್ನು ಪಾವತಿಸುವಂತೆ ಅರ್ಜಿದಾರರಿಗೆ ಆದೇಶಿಸಲಾಗಿದೆ.

**(ಕಾವ್ಯಶ್ರೀ. ಎಂ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.